ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿ/ಶೈಶಾ-04/ರೈ.ಮ.ವಿ.ಅ.ಬಿ.ಕು/1/2016-17

ದಿನಾಂಕ:18-02-2017

ತಿದ್ದುಪಡಿ ಜ್ಞಾಪನ

ವಿಷಯ: ರಾಜ್ಯದ ಬರಪರಸ್ಥಿತಿ ಹಿನ್ನಲೆಯಲ್ಲಿ ರೈತರಿಗೆ ಪರಿಹಾರ ನೀಡುವ ಭಾಗವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚ ಪರಿಹಾರ ನೀಡುವ ಬಗ್ಗೆ.

ಉಲ್ಲೇಖ: ಈ ನಿರ್ದೇಶನಾಲಯದ ಜ್ಞಾಪನ ಸಂಖ್ಯೆ: ಪಪೂಶಿಇ/ಶೈಶಾ-04ರೈ.ಮ.ವಿ.ಅ.ಬಿ.ಕು/2016-17, ದಿನಾಂಕ: 10-02-2017.

****

ರಾಜ್ಯದಲ್ಲಿನ ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಅನುವಾಗಲು ಸರ್ಕಾರದ ಆದೇಶದಂತೆ ಪದಪಿ ಪೂರ್ವ ಶಿಕ್ಷಣವನ್ನು ಮುಂದುವರೆಸಲು ಸರ್ಕಾರವು ಅನುದಾನವನ್ನು 30 ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರುಗಳಿಗೆ ಪ್ರತಿ ಜಿಲ್ಲೆಗೆ ರೂ 1.00ಲಕ್ಷದಂತೆ ಒಟ್ಟು ರೂ 30.00ಲಕ್ಷಗಳನ್ನು "ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳು" ಲೆಕ್ಕಶೀರ್ಷಿಕೆ 2202-.80-800-0-49-059(ಯೋಜನೆ)ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಉಲ್ಲೇಖಿತ ಜ್ಞಾಪನದಲ್ಲಿ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಗೆ ಸಂಬಂಧಿಸಿದಂತೆ ರೂ 1,00,000/- ಗಳನ್ನು ಬೆಂಗಳೂರಿನ ಯಾವ ಜಿಲ್ಲೆಗೆ ಅಗತ್ಯವಿದೆಯೋ ಆ ಜಿಲ್ಲೆಗೆ ಬಿಡುಗಡೆ ಮಾಡುವುದು ಎಂದು ತಿಳಿಸಲಾಗಿತ್ತು. ಅದರ ಬದಲಿಗೆ ಬೆಂಗಳೂರು ಉತ್ತರ ಜಿಲ್ಲೆಗೆ ರೂ 50,000/- ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗೆ ರೂ 50,000/-ಗಳನ್ನು ಬಿಡುಗಡೆ ಮಾಡಲು ತಿಳಿಸಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ

1. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿ/ಶೈಶಾ-04/ರೈ.ಮ.ವಿ.ಅ.ಬಿ.ಕು/2016-17

ದಿನಾಂಕ:10-02-2017

## ಜ್ಞಾಪನ

ವಿಷಯ: ರಾಜ್ಯದ ಬರಪರಸ್ಥಿತಿ ಹಿನ್ನಲೆಯಲ್ಲಿ ರೈತರಿಗೆ ಪರಿಹಾರ ನೀಡುವ ಭಾಗವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚ ಪರಿಹಾರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: 227 ಮಾಹಿತಿ ದಿನಾಂಕ: 13-11-2015.

2. ಸಾರ್ವಜನಿಕ ಶಿಕ್ಷಣ ಇಲಾಖೆಯ ಕಛೇರಿ ಜ್ಞಾಪನ ದಿನಾಂಕ; 20-02-2016 ಮತ್ತು ನೆನಪೋಲೆ ದಿನಾಂಕ: 11-07-2016.

3. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ: 212, ಅ ರೈ ಮ-01/2015-16, ದಿನಾಂಕ: 15-11-2016.

4. ಈ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಪಪೂಶಿಇ/ಶೈಶಾ-04/ಸು-11/2016-17, ದಿನಾಂಕ: 19-11-2016.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ ಹಾಗೂ ಪ್ರೌಢ ಮತ್ತು ಪದವಿ ಪೂರ್ವ ಹಂತದವರೆಗೆ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚವನ್ನು ಪಾವತಿ ಮಾಡುವಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಆದೇಶಿಸಲಾಗಿದೆ. ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ ಉಚಿತ ಶಿಕ್ಷಣ ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚವನ್ನು ಪರಿಹಾರ ರೂಪದಲ್ಲಿ ಪಾವತಿಸಬೇಕಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನದಂಡಗಳನ್ನು ಉಲ್ಲೇಖ-04ರ ಈ ನಿರ್ದೇಶನಾಲಯದ ಸುತ್ತೋಲೆಯಲ್ಲಿ ತಿಳಿಸಿಲಾಗಿತ್ತು. ಅದರಂತೆ 30 ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರುಗಳಿಗೆ ಪ್ರತಿ ಜಿಲ್ಲೆಗೆ ರೂ 1.00ಲಕ್ಷದಂತೆ ಒಟ್ಟು ರೂ 30.00ಲಕ್ಷಗಳನ್ನು "ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳು" ಲೆಕ್ಕಶೀರ್ಷಿಕೆ 2202-.80-800-0-49-059(ಯೋಜನೆ)ರಡಿಯಲ್ಲಿ ಅನುದಾನವನ್ನು ಸರ್ಕಾರದ ಆದೇಶದಂತೆ ಬಿಡುಗಡೆ ಮಾಡ ಬೇಕಾಗಿರುತ್ತದೆ.

| sl.no | District | Amount should be released |
|---|---|---|
| 1 | ಬೆಂಗಳೂರು-ಉತ್ತರ | ರೂ 1,00,000/- (ಯಾವ ಜಿಲ್ಲೆಗೆ ಅಗತ್ಯವಿರುವ ಜಿಲ್ಲೆಗೆ ಬಿಡುಗಡೆ ಮಾಡುವುದು) |
| 2 | ಬೆಂಗಳೂರು-ದಕ್ಷಿಣ | |
| 3 | ಬೆಂಗಳೂರು-ಗ್ರಾಮಾಂತರ | ರೂ 1,00,000/- |
| 4 | ರಾಮನಗರ | ರೂ 1,00,000/- |
| 5 | ಬಳ್ಳಾರಿ | ರೂ 1,00,000/- |

| | | |
|---|---|---|
| 6 | ಬೆಳಗಾವಿ | ರೂ 1,00,000/- |
| 7 | ಬಾಗಲಕೋಟೆ | ರೂ 1,00,000/- |
| 8 | ವಿಜಾಪುರ | ರೂ 1,00,000/- |
| 9 | ಬೀದರ | ರೂ 1,00,000/- |
| 10 | ದಾವಣಗೆರೆ | ರೂ 1,00,000/- |
| 11 | ಚಿತ್ರದುರ್ಗ | ರೂ 1,00,000/- |
| 12 | ಚಿಕ್ಕಮಗಳೂರು | ರೂ 1,00,000/- |
| 13 | ಗದಗ | ರೂ 1,00,000/- |
| 14 | ಹಾವೇರಿ | ರೂ 1,00,000/- |
| 15 | ಧಾರವಾಡ | ರೂ 1,00,000/- |
| 16 | ಗುಲ್ಬರ್ಗಾ | ರೂ 1,00,000/- |
| 17 | ಯಾದಗಿರಿ | ರೂ 1,00,000/- |
| 18 | ಹಾಸನ | ರೂ 1,00,000/- |
| 19 | ಚಿಕ್ಕಬಳ್ಳಾಪುರ | ರೂ 1,00,000/- |
| 20 | ಕೋಲಾರ | ರೂ 1,00,000/- |
| 21 | ಚಾಮರಾಜನಗರ | ರೂ 1,00,000/- |
| 22 | ಮಂಡ್ಯ | ರೂ 1,00,000/- |
| 23 | ಮೈಸೂರು | ರೂ 1,00,000/- |
| 24 | ಉತ್ತರ ಕನ್ನಡ | ರೂ 1,00,000/- |
| 25 | ಕೊಪ್ಪಳ | ರೂ 1,00,000/- |
| 26 | ರಾಯಚೂರು | ರೂ 1,00,000/- |
| 27 | ಉಡುಪಿ | ರೂ 1,00,000/- |
| 28 | ದಕ್ಷಿಣ ಕನ್ನಡ | ರೂ 1,00,000/- |
| 29 | ಶಿವಮೊಗ್ಗ | ರೂ 1,00,000/- |
| 30 | ತುಮಕೂರು | ರೂ 1,00,000/- |
| 31 | ಕೊಡಗು | ರೂ 1,00,000/- |
| | ಒಟ್ಟು | ರೂ 30,00,000/- |

## ಆದೇಶ:

ದಿನಾಂಕ: 01-04-2015ನಂತರ ರಾಜ್ಯದಲ್ಲಿ ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ಮುಂದುವರೆಸಲು ಅನುವಾಗುವಂತೆ

ರೂಪದಲ್ಲಿ ಪಾವತಿಸಬೇಕಾಗಿದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಧಿಸಲಾದ ಮಾನದಂಡಗಳನ್ವಯ ರಾಜ್ಯದ 30 ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರುಗಳಿಗೆ ಪ್ರತಿ ಜಿಲ್ಲೆಗೆ ರೂ 1.00ಲಕ್ಷದಂತೆ ಒಟ್ಟು ರೂ 30.00ಲಕ್ಷಗಳನ್ನು "ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳು" ಲೆಕ್ಕಶೀರ್ಷಿಕೆ 2202-.80-800-0-49-059(ಯೋಜನೆ)ರಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:-

1. ಸರ್ಕಾರದ ಕಾರ್ಯದರ್ಶಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಮುಂದಿನ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
3. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ